## ಪದ್ಯ ೧. ಸಂಕಲ್ಪ ಗೀತೆ

**ಆ) ೨-೩ ವಾಕ್ಯದಲ್ಲಿ ಉತ್ತರಿಸಿರಿ.**

**೧. ಹಡಗನ್ನು ಯಾವುದರ ಬೆಳಕಿನಲ್ಲಿ ಮುನ್ನಡೆಸಬೇಕಿದೆ?**

ಉ) ನಮ್ಮ ಬದುಕಿನ ಸುತ್ತಲು ಕತ್ತಲೆ ಕವಿದಿದೆ. ಬಿರುಗಾಳಿ ಬೀಸುತ್ತಿದೆ. ಬಿರುಗಾಳಿಗೆ ಸಿಕ್ಕಿರುವ ಹಡಗನ್ನು ಎಚ್ಚರಿಕೆಯಿಂದ ಪ್ರೀತಿಯ ಹಣತೆಯ ಬೆಳಕಿನಲ್ಲಿ ಮುನ್ನಡೆಸಬೇಕಿದೆ.

**೨. ಕಾಡುಗಳಿಗೆ ಹೇಗೆ ಮುಟ್ಟಬೇಕಿದೆ?**

ಉ) ಋತುಗಳ ರಾಜನಾದ ವಸಂತನು ಬರಡಾಗಿರುವ ಕಾಡುಗಳು ಹಚ್ಚ ಹಸುರಿನಿಂದ ಕಂಗೊಳಿಸುವಂತೆ ಮುಟ್ಟಬೇಕಿದೆ. ವಸಂತನ ಆಗಮನದಿಂದ ಬರಡಾಗಿರುವ ಕಾಡಿನಲ್ಲಿ ಮರಗಳು ಚಿಗುರಿ ಪ್ರಕೃತಿಗೆ ನವ ಚೈತನ್ಯ ಮೂಡಬೇಕಿದೆ.

**೩. ಹೊಸ ಭರವಸೆಗಳನ್ನು ಮೂಡಿಸಿ ಯಾವುದರ ನಡುವೆ ಸೇತುವೆಯಾಗಬೇಕಿದೆ?**

ಉ) ಇಂದು ಸಮಾಜವು ಮತ, ಜಾತಿ, ಪಂಥ, ಬಡವ, ಶ್ರೀಮಂತ ಮುಂತಾದ ಭೇದಭಾವಗಳಿಂದ ಮನುಜರ ನಡುವೆ ಅಡ್ಡಗೋಡೆಗಳು ನಿರ್ಮಾಣವಾಗಿವೆ. ಸ್ನೇಹ, ಪ್ರೀತಿ, ನಂಬಿಕೆಯ ಮೂಲಕ ಮನುಜರ ನಡುವಣ ಈ ಭೇದಭಾವಗಳೆಂಬ ಅಡ್ಡಗೋಡೆಗಳನ್ನು ಕೆಡುವುತ, ಬಿದ್ದುದನ್ನು ಮೇಲೆಬ್ಬಿಸಿ, ನಿಲ್ಲಿಸಿ ಹೊಸ ಭರವಸೆಗಳನ್ನು ಮೂಡಿಸಿ ಮನುಜ ಮನುಜ ನಡುವೆ ಸೇತುವೆಯಾಗಬೇಕಿದೆ.

**೪. ನಾಳಿನ ಕನಸನ್ನು ಬಿತ್ತ ಬೇಕಾದರೆ ನಾವು ಹೇಗೆ ಬದುಕಬೇಕು?**

ಉ) ಮತಧರ್ಮಗಳು ದಾರಿ ತೋರಿಸುವ ದೀಪಗಳು ಆಗಿರುವುದರಿಂದೆಲ್ಲಾ ಮತಗಳನ್ನು ಪುರಸ್ಕರಿಸುವ ಎಚ್ಚರಿಕೆಯಲ್ಲಿ ನಾವು ಬದುಕಬೇಕು.. ಭಯ ಸಂಶಯಗಳನ್ನು ನಿವಾರಿಸಿಕೊಂಡು ಬದುಕಬೇಕು ಮನದ ಕಣ್ಣಿನಲ್ಲಿ ಭವಿಷ್ಯದ ಕನಸ್ಸನ್ನು ಬಿತ್ತುತ್ತ ಬದುಕನ್ನು ನಡೆಸಬೇಕು.

**ಇ) ೮-೧೦ ವಾಕ್ಯದಲ್ಲಿ ಉತ್ತರಿಸಿರಿ.**

**೧. ನಾವು ಯಾವ ಸಂಕಲ್ಪ ಕೈಗೊಳ್ಳಬೇಕೆಂಬುದು ಕವಿ ಶಿವರುದ್ರಪ್ಪನವರ ಆಶಯ?**

ಉ) ನಾವು ಜೀವನದಲ್ಲಿ ಧನಾತ್ಮಕ ಭಾವನೆಯನ್ನು ದೃಢ ಸಂಕಲ್ಪವನ್ನು ಹೊಂದಬೇಕು. ಯಾವುದೇ ರೀತಿಯ ಸವಾಲುಗಳು ಎದುರಾದಾಗಲೂ ಆತ್ಮವಿಶ್ವಾಸ ಸಂಕಲ್ಪ ನಿಷ್ಠೆಯಿಂದ ಕ್ರಿಯಾಶೀಲರಾದಾಗ ಯಶಸ್ಸು ಲಭಿಸುತ್ತದೆ. ಭೇಧ ಭಾವವನ್ನು ಹೋಗಲಾಡಿಸಿ ಐಕ್ಯದಿಂದ ಪ್ರಯತ್ನಶೀಲರಾದಾಗ ಬಲ ವರ್ಧಿಸಬೇಕು. ಭಯ ಮತ್ತು ಅನುಮಾನ ಆವರಿಸಿರುವ ಸಮಾಜವನ್ನು ಧೃಢನಿಷ್ಠೆಯಿಂದ ಸ್ವಾಸ್ಥ್ಯದ ನೆಲೆಯಾಗಿಸುವ ಹಣತೆಯನ್ನು ಹಚ್ಚಿದಾಗ ಕತ್ತಲೆಯನ್ನು ದೂರ ಮಾಡಬಹುದು ಕವಿ ಹೇಳಿದ್ದಾರೆ.

**೨. ಸಂಕಲ್ಪ ಮತ್ತು ಅನುಷ್ಠಾನದ ಕುರಿತು ಕವಿ ಶಿವರುದ್ರಪ್ಪನವರ ಅಭಿಪ್ರಾಯವನ್ನು ವಿವರಿಸಿ.**

ಉ) ನಾವು ಜೀವನದಲ್ಲಿ ಪ್ರೀತಿಯ ದೀಪವನ್ನು ಹಚ್ಚುವ ಸಂಕಲ್ಪ ಕೈಗೊಳ್ಳುವುದರಿಂದ ದ್ವೇಷ ರಹಿತ ಸಮಾಜ ನಿರ್ಮಾಣ ಮಾಡಬಹುದು. ನಾವು ಬದುಕಿನಲ್ಲಿ ಎಚ್ಚರಿಕೆಯಿಂದ ಮುನ್ನಡೆಯುವ ಸಂಕಲ್ಪ ಮಾಡುವುದರಿಂದ ಎಂತಹ ಸವಾಲುಗಳನ್ನು ಧೈರ್ಯವಾಗಿ ಎದುರಿಸಬಹುದು. ನಾವು ವನಸಂರಕ್ಷಣೆಯ ಸಂಕಲ್ಪ ಕೈಗೊಳ್ಳುವುದರಿಂದ ಕಾಡುಗಳು ಹಚ್ಚ ಹಸುರಿನಿಂದ ಕಂಗೊಳಿಸುವಂತೆ ಮಾಡಬಹುದು. ನಾವು ಹೊಸ ಭರವಸೆಯನ್ನು ಮೂಡಿಸುವ ಸಂಕಲ್ಪ ಕೈಗೊಳ್ಳುವುದರಿಂದ ಸಮಾಜದ ನೈತಿಕ ಅಧಃಪತನವನ್ನು ತಡೆಯಬಹುದು. ನಾವು ಸಮಾನತೆಯ ಮನೋಭಾವನೆ ಉಳ್ಳವರಾಗುವ ಸಂಕಲ್ಪ ಕೈಗೊಳ್ಳುವುದರಿಂದ ಮನುಜ ಮನುಜರ ನಡುವಿನ ಅಸಮಾನತೆಯ ಅಡ್ಡಗೋಡೆಗಳನ್ನು ಕೆಡುಹಬಹುದು. ಭಯ ಹಾಗೂ ಸಂಶಯಗಳಿಂದ ಮುಕ್ತರಾಗುವ ಸಂಕಲ್ಪವನ್ನು ಕೈಗೊಳ್ಳುವುದರಿಂದ ಭವಿಷ್ಯದ ಹೊಂಗನಸನ್ನು ಕಾಣಬಹುದು. ಹೀಗೆ ಕವಿ ಶಿವರುದ್ರಪ್ಪನವರು ತಮ್ಮ ಅಭಿಪ್ರಾಯವನ್ನು ವ್ಯಕ್ತ ಪಡಿಸಿದ್ದಾರೆ.

**ಈ) ಸಂದರ್ಭ ಸಹಿತ ಸ್ವಾರಸ್ಯವನ್ನು ವಿವರಿಸಿ.**

**೧. "ಪ್ರೀತಿಯ ಹಣತೆ ಹಚ್ಚೋಣ"**

ಈ ವಾಕ್ಯವನ್ನು *ಡಾ. ಜಿ. ಎಸ್. ಶಿವರುದ್ರಪ್ಪ* ಅವರು ಬರೆದಿರುವ ***'ಸಂಕಲ್ಪ ಗೀತೆ'*** ಎಂಬ ಪದ್ಯ ಭಾಗದಿಂದ ಆರಿಸಲಾಗಿದೆ.

**ಆಕರ ಗ್ರಂಥ: 'ಎದೆ ತುಂಬಿ ಹಾಡಿದೆನು'** ಎಂಬ ಕವನ ಸಂಕಲನದಿಂದ ಆಯ್ಕೆ ಮಾಡಲಾಗಿದೆ.

**ಸಂದರ್ಭ**: ಕವಿಗಳು "ಜೀವನದಲ್ಲಿ ಧನಾತ್ಮಕ ಮನೋಭಾವನೆಯ ದೃಢಸಂಕಲ್ಪವನ್ನು ಹೊಂದಿರಬೇಕು." ಎಂದು ಹೇಳುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ:** "ನಾವು ಜೀವನದಲ್ಲಿ ಪ್ರೀತಿಯ ದೀಪವನ್ನು ಹಚ್ಚುವ ಸಂಕಲ್ಪ ಕೈಗೊಳ್ಳುವುದರಿಂದ ದ್ವೇಷರಹಿತ ಸಮಾಜ ನಿರ್ಮಾಣ ಮಾಡಬಹುದು" ಎಂದು ಕವಿಗಳು ಸ್ವಾರಸ್ಯಪೂರ್ಣವಾಗಿ ತಮ್ಮ ಭಾವನೆಯನ್ನು ಅಭಿವ್ಯಕ್ತಪಡಿಸುತ್ತಾರೆ.

**೨. "ಮುಂಗಾರಿನ ಮಳೆಯಾಗೋಣ"**

ಈ ವಾಕ್ಯವನ್ನು *ಡಾ. ಜಿ. ಎಸ್. ಶಿವರುದ್ರಪ್ಪ* ಅವರು ಬರೆದಿರುವ ***'ಸಂಕಲ್ಪ ಗೀತೆ'*** ಎಂಬ ಪದ್ಯ ಭಾಗದಿಂದ ಆರಿಸಲಾಗಿದೆ.

**ಆಕರ ಗ್ರಂಥ: 'ಎದೆ ತುಂಬಿ ಹಾಡಿದೆನು'** ಎಂಬ ಕವನ ಸಂಕಲನದಿಂದ ಆಯ್ಕೆ ಮಾಡಲಾಗಿದೆ.

**ಸಂದರ್ಭ**: ಇಂದು ಪರಿಸರ ಮಲಿನಗೊಂಡಿದೆ. ಅದನ್ನು ಶುಚಿಗೊಳಿಸುವ ಸಂಕಲ್ಪ ಮಾಡಬೇಕಿದೆ. ಮುಂಗಾರಿನ ಮಳೆಯ ಆರ್ಭಟಕ್ಕೆ ಕಲುಷಿತ ನೀರು ಹರಿದು ಹೋಗುತ್ತದೆ. ಹೀಗೆ ಕಲುಷಿತ

| | |
|---|---|
| ನದಿ ನೀರನ್ನು ತಿಳಿಯಾಗಿಸಲು ಮುಂಗಾರಿನ ಮಳೆಯಾಗಿಸೋಣ. ಬರಡಾಗಿರುವ ಕಾಡುಮೇಡುಗಳಲ್ಲಿ ಹೊಸ ಚಿಗುರನ್ನು ತರೋಣ ಎಂದು ಕವಿ ಹೇಳಿದ್ದಾರೆ.<br>**ಸ್ವಾರಸ್ಯ:** "ನಾವು ಮುಂಗಾರಿನ ಮಳೆಯಂತೆ ಪರಿಸರ ಸಂರಕ್ಷಿಸುವ ಸಂಕಲ್ಪ ಕೈಗೊಳ್ಳುವುದರಿಂದ ನದೀಜಲಗಳನ್ನು ಶುದ್ಧವಾಗಿ ಇಟ್ಟುಕೊಳ್ಳಬಹುದು" ಎಂದು ಕವಿಗಳು ಸ್ವಾರಸ್ಯಪೂರ್ಣವಾಗಿ ತಮ್ಮ ಭಾವನೆಯನ್ನು ಅಭಿವ್ಯಕ್ತಪಡಿಸುತ್ತಾರೆ<br><br>**೩. "ಹೊಸ ಭರವಸೆಗಳನ್ನು ಕಟ್ಟೋಣ."**<br>ಈ ವಾಕ್ಯವನ್ನು *ಡಾ. ಜಿ. ಎಸ್. ಶಿವರುದ್ರಪ್ಪ* ಅವರು ಬರೆದಿರುವ ***'ಸಂಕಲ್ಪ ಗೀತೆ'*** ಎಂಬ ಪದ್ಯ ಭಾಗದಿಂದ ಆರಿಸಲಾಗಿದೆ.<br>**ಆಕರ ಗ್ರಂಥ:** **'ಎದೆ ತುಂಬಿ ಹಾಡಿದೆನು'** ಎಂಬ ಕವನ ಸಂಕಲನದಿಂದ ಆಯ್ಕೆ ಮಾಡಲಾಗಿದೆ.<br>**ಸಂದರ್ಭ:** ಸವಾಲುಗಳನ್ನು ಎದುರಿಸಲು ಆತ್ಮವಿಶ್ವಾಸವನ್ನು ತುಂಬಬೇಕು. ಬಲಹೀನರರನ್ನು ಮೇಲೆಬ್ಬಿಸಿ ಅವರಲ್ಲಿ ಆತ್ಮವಿಶ್ವಾಸ ತುಂಬಬೇಕು ಭೇಧಭಾವಗಳನ್ನು ಮರೆತು ಹೊಸ ಜೀವನವನ್ನು ಸಾಗಿಸಬೇಕು. ಹೀಗೆ ಮನುಜರ ನಡುವಣ ಅಸಮಾನತೆಯನ್ನು ಹೋಗಲಾಡಿಸಿ ಸಮಾನತೆಯ ಸೇತುವೆ ಕಟ್ಟೋಣ ಎಂದು ಕವಿ ಹೇಳಿದ್ದಾರೆ.<br>**ಸ್ವಾರಸ್ಯ:** "ನಾವು ಹೊಸ ಭರವಸೆಯನ್ನು ಮೂಡಿಸುವ ಸಂಕಲ್ಪ ಕೈಗೊಳ್ಳುವುದರಿಂದ ಸಮಾಜದ ನೈತಿಕ ಅಧಃಪತನವನ್ನು ತಡೆಯಬಹುದು. ಎಂದು ಕವಿಗಳು ಸ್ವಾರಸ್ಯಪೂರ್ಣವಾಗಿ ತಮ್ಮ ಭಾವನೆಯನ್ನು ಅಭಿವ್ಯಕ್ತಪಡಿಸುತ್ತಾರೆ<br><br>೪. **"ಹೊಸ ಎಚ್ಚರದೊಳು ಬದುಕೋಣ"**<br>ಈ ವಾಕ್ಯವನ್ನು *ಡಾ. ಜಿ. ಎಸ್. ಶಿವರುದ್ರಪ್ಪ* ಅವರು ಬರೆದಿರುವ ***'ಸಂಕಲ್ಪ ಗೀತೆ'*** ಎಂಬ ಪದ್ಯ ಭಾಗದಿಂದ ಆರಿಸಲಾಗಿದೆ.<br>**ಆಕರ ಗ್ರಂಥ:** **'ಎದೆ ತುಂಬಿ ಹಾಡಿದೆನು'** ಎಂಬ ಕವನ ಸಂಕಲನದಿಂದ ಆಯ್ಕೆ ಮಾಡಲಾಗಿದೆ.<br>**ಸಂದರ್ಭ:** ಜಾತಿ ಮತಗಳೆಲ್ಲವನ್ನು ಬಿಟ್ಟು ಎಲ್ಲರೂ ಒಂದಾಗಿ ಐಕ್ಯ ಪಥದೊಳು ಹೊಂದಿಕೊಂಡು ಎಚ್ಚರದಿಂದ ಬದುಕಬೇಕು ಎಂದು ಕವಿ ಹೇಳಿದ್ದಾರೆ.<br>**ಸ್ವಾರಸ್ಯ:** "ಎಲ್ಲ ಮತಗಳು ಸಾಧನೆಯ ದಾರಿಗಳು ಎಂಬ ಎಚ್ಚರದಲ್ಲಿ ಬದುಕುವ ಸಂಕಲ್ಪ ಕೈಗೊಳ್ಳುವುದರಿಂದ ದೇಶದಲ್ಲಿ ಶಾಂತಿ ನೆಲೆಸುವಂತೆ ಮಾಡಬಹುದು" ಎಂದು ಕವಿಗಳು ಸ್ವಾರಸ್ಯಪೂರ್ಣವಾಗಿ ತಮ್ಮ ಭಾವನೆಯನ್ನು ಅಭಿವ್ಯಕ್ತಪಡಿಸುತ್ತಾರೆ. | |